C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 80/2022 ಸಿ. ಡಬ್ಲ್ಯೂ- 4 ಪಿ. ಡಬ್ಲ್ಯೂ -4

ದಿನಾಂಕ : 21.03.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಶಂಕರೇಗೌಡ |
| ತಂದೆಯ ಹೆಸರು | ಚಿಕ್ಕನಂಜೇಗೌಡ |
| ವಯಸ್ಸು | 52 ವರ್ಷ |
| ಉದ್ಯೋಗ | ವಾಟರ್ ಮನ್,<br>ಚೋಳೇನಹಳ್ಳಿ ಪಂಚಾಯತಿ |
| ವಾಸ | ಚೋಳೇನಹಳ್ಳಿ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನನಗೆ ಚಾಸಾ-2 ಪರಿಚಯ ಇದೆ. ನನಗೆ ಚಾಸಾ-3 ರವರ ಪರಿಚಯವಿಲ್ಲ. ಆರೋಪಿಗಳನ್ನು ನನಗೆ ನೋಡಿ ಪರಿಚಯವಿದೆ.

2. ನನಗೆ ಈ ಪ್ರಕರಣದ ವಿಚಾರ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾರು ಯಾರ ನಡುವೆ, ಎಲ್ಲಿ, ಏನು ನಡೆಯುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಯಾರು ಯಾರಿಗೆ ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ವಿಚಾರಣೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ದಾಖಲೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

3. ದಿ: 30.04.2019 ರಂದು ಸಿ.ಬಂಗಲಿ ಗ್ರಾಮದ ಚಿಕ್ಕತಾಯಮ್ಮ ರವರು ಮನೆಯನ್ನು ಕಟ್ಟಿಸಲು ಪಾಯ ಹಾಕುತ್ತಿದ್ದುದನ್ನು ನೋಡಿಕೊಂಡು ಬರಲೆಂದು ನನ್ನನ್ನು ರಂಗನಾಥ ರವರು ತೊರೆಹಳ್ಳದ ಮಾರ್ಗವಾಗಿ ಸಂಜೆ 5.30ರ ಸಮಯದಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಶಬ್ದ ಕೇಳಿಸಿತು ಎಂದರೆ ಸರಿಯಲ್ಲ. ನಾನು ಮತ್ತು ರಂಗನಾಥ ಸ್ದಳಕ್ಕೆ ಹೋಗಿ ನೋಡಲಾಗಿ ಜಯಲಕ್ಷ್ಮಮ್ಮ

ರವರ ಮೈದುನ ಅಶೋಕ ಕುಮಾರ ಮತ್ತು ಆತನ ಹೆಂಡತಿ ಗಿರಿಜಾ ರವರು ಗಲಾಟೆ ಮಾಡುತ್ತಿದ್ದರು ಎಂದರೆ ನಾನು ನೋಡಿಲ್ಲ. ಅಶೋಕ ಕುಮಾರ ಜಯಲಕ್ಷ್ಮಮ್ಮಳಿಗೆ ಸೂಳೆ ಮುಂಡೆ, ನಾಯಿ ಮುಂಡೆ ನಿನ್ನದು ಅತಿಯಾಯಿತು ಇವತ್ತು ನಿನ್ನನ್ನು ಇಲ್ಲಿಯೇ ಮುಗಿಸುತ್ತೇನೆಂದು ತನ್ನ ಕೈಯಲ್ಲಿ ಹಿಡಿದಿದ್ದ ಮಚ್ಚಿನಿಂದ ಬೀಸಿದಾಗ ತಪ್ಪಿಸಿಕೊಳ್ಳಲು ಜಯಲಕ್ಷ್ಮಮ್ಮ ಕೈಯನ್ನು ಅಡ್ಡಕೊಟ್ಟಾಗ ಎರಡೂ ಕೈಗಳಿಗೆ ಮಚ್ಚಿನ ಏಟು ತಗುಲಿ ರಕ್ತಗಾಯವಾಗಿದ್ದು, ಆಕೆ ತಪ್ಪಿಸಿಕೊಂಡು ಓಡಿಲು ಯತ್ನಿಸಿದಾಗ ಮಚ್ಚಿನಿಂದ ಬಲತೋಳು ಮತ್ತು ಬಲಪಕ್ಕೆಗೆ ಹೊಡೆದನು ಎಂದರೆ ನಾನು ನೋಡಲಿಲ್ಲ. ಅಶೋಕ ಕುಮಾರನ ಹೆಂಡತಿ ಗಿರಿಜಾ ಲೋಫರ್ ಮುಂಡೆಯನ್ನು ಜೀವ ಸಹಿತ ಬಿಡಬಾರದು ಎಂದು ಕೈಗಳಿಂದ ಜಯಲಕ್ಷ್ಮಮ್ಮನ ಮುಖ ಮತ್ತು ಮೈಮೇಲೆ ಹೊಡೆದು, ಕಾಲಿನಿಂದ ಒದ್ದು, ಜುಟ್ಟನ್ನು ಹಿಡಿದು ಎಳೆದಾಡಿ ಕೆಳಕ್ಕೆ ಬೀಳಿಸಿದಳು ಎಂದರೆ ನಾನು ನೋಡಲಿಲ್ಲ. ಅಷ್ಟರಲ್ಲಿ ಹೇಮಲತಾ ಬಿಡಿಸಲು ಹೋದಾಗ ಗಿರಿಜಾಳು ಆಕೆಯನ್ನು ನೂಕಿದಳು, ಆಗ ಶೋಕ ಕುಮಾರ ತನ್ನ ಕೈಯಲ್ಲಿದ್ದ ಮಚ್ಚಿನಿಂದ ಬಲವಾಗಿ ಆಕೆಯ ಎರಡೂ ಕಾಲುಗಳಿಗೆ ಹೊಡೆದು ರಕ್ತಗಾಯವನ್ನು ಉಂಟು ಮಾಡಿದನು ಎಂದರೆ ನಾನು ನೋಡಲಿಲ್ಲ.

4. ತಕ್ಷಣ ನಾನು ಮತ್ತು ರಂಗನಾಥ ಇಬ್ಬರೂ ಜಯಲಕ್ಷ್ಮಮ್ಮ ರವರಿಗೆ ಹೊಡೆಯುತ್ತಿದ್ದುದನ್ನು ಬಿಡಿಸಿ ಅಶೋಕ ಕುಮಾರ ಕೈಯಲ್ಲಿದ್ದ ಕಬ್ಬಿಣದ ಮಚ್ಚನ್ನು ಕಿತ್ತುಕೊಂಡೆವು ಎಂದರೆ ಸರಿಯಲ್ಲ. ನಾವುಗಳು ಮಚ್ಚನ್ನು ಕಿತ್ತುಕೊಳ್ಳದಿದ್ದರೆ ಜಯಲಕ್ಷ್ಮಮ್ಮನನ್ನು ಹೊಡೆದು ಸಾಯಿಸಿ ಬಿಡುತ್ತಿದ್ದರು ಎಂದರೆ ಸರಿಯಲ್ಲ. ಜಯಲಕ್ಷ್ಮಮ್ಮ ರವರ ಎರಡೂ ಕೈ, ಎರಡೂ ಪಕ್ಕೆ ಹಾಗೂ ಎರಡೂ ಮಾಣಕಾಲುಗಳಿಗೆ ಪೆಟ್ಟಾಗಿ ರಕ್ತ ಸುರಿಯುತ್ತಿತ್ತು ಎಂದರೆ ನಾನು ನೋಡಲಿಲ್ಲ. ಆಗ ಆರೋಪಿಗಳು ಇವತ್ತು ಬಚಾವಾಗಿದ್ದೀಯಾ ಇನ್ನೊಂದು ದಿನ ನಿನ್ನನ್ನು ಮುಗಿಸದೇ ಬಿಡುವುದಿಲ್ಲ ಎಂದು ಜಯಲಕ್ಷ್ಮಮ್ಮ ರವರಿಗೆ ಕೊಲೆ ಬೆದರಿಕೆ ಹಾಕಿ ಹೊರಟು ಹೋದರು ಎಂದರೆ ನಾನು ನೋಡಲಿಲ್ಲ. ನಾನು ಮತ್ತು ರಂಗನಾಥ ಹಾಗೂ ಹೇಮಲತಾ ಜಯಲಕ್ಷ್ಮಮ್ಮ ನನ್ನು ಆಂಬ್ಯುಲೆನ್ಸ್ ನಲ್ಲಿ ಆದಿಚುಂಚನಗಿರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ ಸರಿಯಲ್ಲ. ಆರೋಪಿಗಳು ಜಮೀನಿನ ವಿಚಾರದಲ್ಲಿ ಹಳೇ ದ್ವೇಷ ಇಟ್ಟುಕೊಂಡು ಕೋಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ ಎಂದು ನಾನು ಪೊಲೀಸರ ಮುಂದ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೆಳಿಕೆಯಲ್ಲಿರುವ ಸದರಿ ಭಾಗವನ್ನು ನಿಪಿ.12 ಎಂದು ಗುರುತಿಸಲಾಯಿತು.

5. ನನಗೆ ಈ ಪ್ರಕರಣದ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನನ್ನ ಪರಿಚಿತರಾದ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿ ಪರವಾಗಿ</u>

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.